ಶಿವಮೊಗ್ಗ ತಾಲ್ಲೂಕಿನಲ್ಲಿ ಭೂ ಸ್ವಾಧೀನ

647 (540) ಶ್ರೀ ಎಂ.ಟಿ.ಕೃಷ್ಣಪ್ಪ (ತುರುವೇಕೆರೆ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಗೃಹ ಮಂಡಳಿಯಿಂದ ಶಿವಮೊಗ್ಗ ತಾಲ್ಲೂಕಿನ ಚೆನ್ನಮುಂಬಾ ಪುರ, ಮುತ್ತೋಡು, ತವರಚಟ್ಟನಹಳ್ಳಿ ಮತ್ತು ನವಿಲೆ ಗ್ರಾಮಗಳಲ್ಲಿ ಪ್ರಾಥಮಿಕ ಹಂತದಲ್ಲಿ 4(1) ಭೂಸ್ವಾಧೀನಪಡಿಸಿಕೊಂಡಿರುವುದು ಜಮೀನಿನ ವಿಸ್ತೀರ್ಣವೆಷ್ಟು (ಗ್ರಾಮವಾರು ಮಾಹಿತಿ ನೀಡುವುದು);

ಆ) ಭೂಸ್ವಾಧೀನದಿಂದ ಕೈಬಿಡಲಾಗಿರುವ ಜಮೀನಿನ ವಿವರ ನೀಡುವುದು?

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು (ವಸತಿ ಸಚಿವರು) :

ಅ) ಸದರಿ ಗ್ರಾಮಗಳಲ್ಲಿ ಒಟ್ಟು 386 ಎಕರೆ 35 ಗುಂಟೆ ಜಮೀನನ್ನು ಕರ್ನಾಟಕ ಗೃಹ ಮಂಡಳಿಯ ವಸತಿ ಯೋಜನೆಗಾಗಿ ಭೂಸ್ವಾಧೀನಪಡಿಸಿಕೊಳ್ಳಲು, ಭೂಸ್ವಾಧೀನ ಕಾಯ್ದೆ ಕಲಂ 4(1) ರನ್ವಯ ದಿನಾಂಕ: 4-3-2009 ರಂದು ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ. ಗ್ರಾಮವಾರು ವಿವರ ಈ ಕೆಳಕಂಡಂತೆಯಿರುತ್ತದೆ.

ಕ್ರಮ ಸಂಖ್ಯೆ	ಗ್ರಾಮ	ವಿಸ್ತೀರ್ಣ ಎ – ಗುಂ
1	ಚನ್ನಮುಂಬಾಪುರ	116–11
2	ಮುತ್ತೋಡು	184–06
3	ತವರಚಟ್ಟನಹಳ್ಳಿ	49–19
4	ನವಿಲೆ	36–39
	ಒಟ್ಟು	**386–35**

ಆ) ಯಾವುದೇ ಜಮೀನನ್ನು ಭೂಸ್ವಾಧೀನದಿಂದ ಕೈಬಿಟ್ಟಿರುವುದಿಲ್ಲ.